ಪಿಡಬ್ಲ್ಯೂ: 3

ಸಾಕ್ಷಿಯನ್ನು ಪುನಃ ದಿಃ **30-08-2021** ರಂದು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ **ಮುಖ್ಯ ವಿಚಾರಣೆಃ- ಮಾನ್ಯ** ಸರ್ಕಾರಿ ಅಭಿಯೋಜಕರಿಂದಃ

ನಾನು ಮೃತ ಶ್ರೀನಾಥನು ಬಳಸುತ್ತಿದ್ದ ಮೊಬೈಲ್ ಅನ್ನು ನೋಡಿದರೆ ಗುರುತಿಸುತ್ತೇನೆ. ಅದು ಸ್ವಲ್ಪ ಕೆಂಪು ಬಣ್ಣದ ಮೊಬೈಲ್ ಆಗಿರುತ್ತದೆ. (ಈ ಹಂತದಲ್ಲಿ ಮು.ಮಾಲು 12 ಮೊಬೈಲ್ ಅನ್ನು ನ್ಯಾಯಾಲಯದ ಮುಂದೆ ಇರಿಸಿದ್ದು ಅದು ಕೆಂಪು ಬಣ್ಣದ ಮೊಬೈಲ್ ಆಗಿರದ ಕಾರಣ ಅದರ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಕರಾರು ಮಾಡಿದ್ದು ತಕರಾರನ್ನು ಮಾನ್ಯ ಮಾಡಲಾಯಿತು.) ಪೊಲೀಸರು ಆರೋಪಿತರು ನನಗೆ ಬೆದರಿಕೆ ಹಾಕಿದ ಕುರಿತು ಬೇರೆ ಏನೂ ವಿಚಾರಣೆ ಮಾಡಿರುವುದಿಲ್ಲ. ಪೋಲೀಸರು ನನಗೆ ಶಿವಪುರ ರಸ್ತೆಯಲ್ಲಿ ನಿಲ್ಲಿಸಿ ದಾಖಲಾತಿಗೆ ನನ್ನ ಹೆಬ್ಬೆಟ್ಟಿನ ರುಜು ಪಡೆದಿರುತ್ತಾರೆ. ಆರೋಪಿತರು ನಾನು ಕೆಲಸಕ್ಕೆ ಹೋಗುವಾಗ ಮತ್ತು ನನ್ನ ಮನೆಯ ಬಳಿಗೆ ಬಂದು ನನಗೆ ಬೆದರಿಕೆ ಹಾಕಿರುತ್ತಾರೆ.

ನಾನು ಈಗ ನನಗೆ ತೋರಿಸಿದ ದಾಖಲಾತಿಗೆ ಹೆಬ್ಬೆಟ್ಟಿನ ಗುರುತನ್ನು ನನ್ನ ಜಾಗದಲ್ಲಿ ಮಾಡಿರುತ್ತೇನೆ. ಈಗ ನಾನು ಸದರಿ ದಾಖಲಾತಿಯನ್ನು ನೋಡುತ್ತಿದ್ದು, ಅದು ದಿಃ 30.09.2018 ರಂದು ಬರೆದಿದೆ ಎನ್ನಲಾದಂತಹ ಮಹಜರ್ ಆಗಿದ್ದು, ಅದನ್ನು ಈಗ ನಿಪಿ 19 ಎಂದು ಗುರುತಿಸಲಾಯಿತು. (ಈ ಹಂತದಲ್ಲಿ ನ್ಯಾಯಾಲಯದ ಮೂಲ ದಾಖಲಾತಿಗಳಲ್ಲಿ ಮೇಲ್ಕಾಣಿಸಿದ ಸ್ಥಳದಲ್ಲಿಯೇ ದಿಃ 02.10.2018 ರಂದು ಬರೆದಿದೆ ಎನ್ನಲಾದ ಮತ್ತೊಂದು ಮಹಜರ್ ನ ಛಾಯಾ ಪ್ರತಿ ಇದ್ದು, ಸದರಿ ಛಾಯಾ ಪ್ರತಿಯು ಮತ್ತು ನಿಪಿ 19 ಒಂದೇ ಆಗಿರುತ್ತದೆ ಮತ್ತು ಛಾಯಾ ಪ್ರತಿಯಲ್ಲಿ ಆರಕ್ಷಕ ಉಪಾಧೀಕ್ಷಕರ ಸಹಿ ಕಂಡು ಬಂದಿರುವುದಿಲ್ಲ, ಆದರೆ ಎಲ್ಲಾ ಸಾಕ್ಷಿದಾರರು ಮತ್ತು ಸದರಿ ಮಹಜರ್ ಅನ್ನು ತನ್ನ ಹಸ್ತದಲ್ಲಿ ಬರೆದಿರುತ್ತೇನೆ ಎಂದು ನಮೂದಿಸಿರುವ ಪೊಲೀಸ್ ಪೇದೆ 566 ಶಂಕರಪ್ಪರವರ ಸಹಿಯು ಕಂಡು ಬಂದಿರುತ್ತದೆ ಎಂಬುದನ್ನು ನ್ಯಾಯಾಲಯವು ಗಮನಿಸಿ ಸದರಿ ಛಾಯಾ ಪ್ರತಿಯನ್ನು ಸುರಕ್ಷಿತವಾಗಿರಿಸಲು ಆದೇಶಿಸಲಾಗಿದೆ.)

<u>ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಸಿಕೆ ವಕೀಲರಿಂದ ಃ-</u>

ಮೃತ ಶ್ರೀನಾಥನು ನೇಣು ಹಾಕಿಕೊಂಡು ಮೃತಪಟ್ಟಿರುತ್ತಾನೆ ಎಂದರೆ ಸರಿ. ಮೃತನು ನನ್ನ ತಮ್ಮನ ಮಗನಾಗಿರುತ್ತಾನೆ. ಪೊಲೀಸರು ಮೊದಲ ಬಾರಿಗೆ ನನ್ನ ಹೇಳಿಕೆಯನ್ನು ಶಿವಪುರ ರಸ್ತೆಯಲ್ಲಿ ದಾಖಲು ಮಾಡಿಕೊಂಡಿರುತ್ತಾರೆ. ಆ ಸಮಯದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಆಗ ಪೊಲೀಸರು ಮೃತ ಶ್ರೀನಾಥನ ಕಡೆಯ ಬೇರೆ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಈಗ ನೋಡಿದ ನಿಪಿ 19 ರಲ್ಲಿನ ಹೆಬ್ಬೆಟ್ಟನ್ನು ನಾನೇ ಮಾಡಿರುತ್ತೇನೆ, ಅದೇ ರೀತಿ ಈಗ ಮತ್ತೊಂದು ದಾಖಲಾತಿಯನ್ನು ತೋರಿಸಿದ್ದು, ಅದು ಛಾಯಾ ಪ್ರತಿಯಾಗಿದ್ದು, ಅದಲ್ಲಿರುವ ಹೆಬ್ಬೆಟ್ಟನ್ನು ಸಹ ತಾನೇ ಮಾಡಿರುತ್ತೇನೆ ಎಂದು ಸಾಕ್ಷಿದಾರರು ಒಪ್ಪಿದ ಮೇರೆಗೆ ಸದರಿ

ದಾಖಲಾತಿಯನ್ನು ಅಂದರೆ ದಿಃ 02.10.2018 ರಂದು ಬರೆದಿದೆ ಎನ್ನಲಾದಂತಹ ಮಹಜರ್ ಅನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಪಿ 19 ಮತ್ತು ನಿಡಿ 1 ರ ಮೇಲಿನ ನನ್ನ ಹೆಬ್ಬೆಟ್ಟಿನ ರುಜುವನ್ನು ಪೊಲೀಸರೇ ಪಡೆದುಕೊಂಡಿರುತ್ತಾರೆ. ಸದರಿ ದಾಖಲಾತಿಯಲ್ಲಿ ಪೊಲೀಸರು ಆರೋಪಿತರು ಏನು ಏನು ಮಾಡಿರುತ್ತಾರೆ ಎಂದು ಕೇಳಿ ಬರೆದುಕೊಂಡು ನನ್ನ ಹೆಬೆಟ್ಟಿನ ರುಜುವನ್ನು ಪಡೆದಿರುತ್ತಾರೆ. ನಾನು ನಿಪಿ 19 ಮತ್ತು ನಿಡಿ 1 ಕ್ಕೆ ಬೇರೆ ಬೇರೆ ದಿನ ಸಹಿ ಹಾಕಿರುತ್ತೇನೆ. ಒಂದು ದಾಖಲಾತಿಗೆ ನಾನು ನನ್ನ ಮನೆಯ ಬಳಿ ಹೆಬ್ಬೆಟ್ಟಿನ ರುಜು ಮಾಡಿರುತ್ತೇನೆ ಮತ್ತು ಮತ್ತೊಂದು ದಾಖಲಾತಿಗೆ ದಾರಿಯಲ್ಲಿ ಹೆಬ್ಬೆಟ್ಟಿನ ರುಜು ಮಾಡಿರುತ್ತೇನೆ. ಮನೆಯ ಹತ್ತಿರ ಪೋಲೀಸರು ಮೊದಲಿಗೆ ನನ್ನ ಹೆಬ್ಬೆಟ್ಟಿನ ರುಜು ಪಡೆದಿರುತ್ತಾರೆ ನಂತರ ದಾರಿಯಲ್ಲಿ ನನ್ನ ಹೆಬ್ಬೆಟ್ಟಿನ ರುಜು ಪಡೆದಿರುತ್ತಾರೆ. ನಾನು ಮುಳಬಾಗಿಲು ಪೊಲೀಸ್ ಠಾಣೆಗೆ ಹೋಗಿದ್ದೆ, ಅಲ್ಲಿ ನನ್ನ ಹೆಬ್ಬೆಟ್ಟಿನ ರುಜು ಪಡೆದಿರುತ್ತಾರೆ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

**(ಸಂತೋಷ್ ಗಜಾನನ್ ಭಟ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.